**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ, ಹಾಗೂ ಶ್ರೀ ಎಸ್.ಎಲ್. ಭೋಜೆಗೌಡ ಇವರು ನಿಯಮ 72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ</u>**

**<u>ವಿಷಯ</u>**

ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್ ನೇತೃತ್ವದ ವರದಿಯಲ್ಲಿನ ಶಿಫಾರಸ್ಸನ್ನು ಸಚಿವ ಸಂಪುಟದಲ್ಲಿ ಒಪ್ಪಿಕೊಂಡು ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಿರುವಂತೆ ಶೇಕಡಾ 100ರಷ್ಟು ವೇತನಾನುದಾನ, ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು (ಅನುದಾನ ಸಂಹಿತೆ) ನೀಡಲು ಡಿಸೆಂಬರ್ 2014ರಲ್ಲಿ ಜಾರಿಗೊಳಿಸಲು ಆದೇಶಿಸಲಾಗಿದೆ. ಸೇವಾ ನಿಯಮಗಳನ್ನು ರೂಪಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ಸದನಕ್ಕೆ ಉತ್ತರ ನೀಡಿದ್ದರು ಸಹ ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಕಳೆದ 10 ವರ್ಷಗಳಿಂದ ಇದುವರೆವಿಗೂ ಸೇವಾ ನಿಯಮಗಳನ್ನು ಇದುವರೆವಿಗೆ ರೂಪಿಸಿ ಜಾರಿಗೊಳಿಸಿರುವುದಿಲ್ಲ. 2006ರ ನಂತರ ಸೇವೆಗೆ ಸೇರಿ ನಿವೃತ್ತಿ ನಂತರ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ನೀಡಿರುವುದಿಲ್ಲ. ಆದ್ದರಿಂದ ಕೌಶಲ್ಯಾಭಿವೃದ್ಧಿ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ನೌಕರರಿಗೆ ಸಿ ಅಂಡ್ ಆರ್ ತಿದ್ದುಪಡಿ ಸೇರಿದಂತೆ ಇತರೆ ಅನುದಾನಿತ ನೌಕರರುಗಳಿಗೆ ನೀಡಿರುವ ಎಲ್ಲಾ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಿ ಆದೇಶ ಹೊರಡಿಸಬೇಕೆಂಬ ನಿಯಮ 72ರಲ್ಲಿ ಮಾನ್ಯ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

**<u>ಹೇಳಿಕೆ</u>**

ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯಲ್ಲಿನ ಬಹುತೇಕ ಶಿಫಾರಸುಗಳನ್ನು ಜಾರಿಗೊಳಿಸಲಾಗಿದ್ದು, ಉಳಿದ ಶಿಫಾರಸುಗಳನ್ನು ಜಾರಿಗೊಳಿಸುವ ಕುರಿತಂತೆ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. ಇದರ ಭಾಗವಾಗಿ ಪ್ರಸ್ತುತ ಜಾರಿಯಲ್ಲಿರುವ Grant-in-aid Code for Industrial Training Institutes in Karnataka 1997 ಅನ್ನು ಪರಿಷ್ಕರಿಸಿ ದಿನಾಂಕ: 30.01.2023ರಂದು Karnataka Technical Education Institutions (Grant-in-Aid Private Industrial Training Institutes) Rules 2023 ಅನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಸದರಿ ಕರಡು ನಿಯಮಾವಳಿಗಳಿಗೆ ಆಕ್ಷೇಪಣೆ ಸಲ್ಲಿಸಲು ನೀಡಲಾಗಿದ್ದ ಕಾಲಾವಧಿಯಲ್ಲಿ ಸ್ವೀಕೃತವಾಗಿದ್ದ ಆಕ್ಷೇಪಣೆಗಳು ಪರಿಶೀಲನಾ ಹಂತದಲ್ಲಿರುತ್ತವೆ. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ವರದಿ ನೀಡಲು ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ವರದಿ ನೀಡಿದ ನಂತರ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು.

**ಕೌಉಜೀಇ 16 ಕೈತಪ್ರ 2025**

(ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.